ಅಧ್ಯಕ್ಷರು.—ಕೆರೆ ಎಲ್ಲಿ ಹೋಯಿತು ಎಂಬುದನ್ನು ಅವರು ಇನ್ನೂ ಹುಡುಕುತ್ತಿದ್ದಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ.—ಅದರ ಬಗ್ಗೆ ಮಾಹಿತಿ ಕೊಡಬೇಕಾಗಿದೆ. ಬಿ.ಡಿ.ಓ. ರವರು ಇದರ ಬಗ್ಗೆ ವಿಚಾರಣೆಯನ್ನು ಮಾಡಿ ವರದಿಯನ್ನು ಸಲ್ಲಿಸಿದ್ದಾರೆ. ನನಗೂ ಸಹ ಆ ವರದಿ ಬಂದಿದೆ. ತಮ್ಮ ಗಮನಕ್ಕೂ ಸಹ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳಿಗೂ ಆ ವರದಿಯ ಪ್ರತಿಯನ್ನು ಕೊಟ್ಟಿದ್ದೇನೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಈಗ ಮಾನ್ಯ ವಿನಯಕುಮಾರ್ ಸೊರ್ಕೆರವರು ಟ್ರಾನ್ಸ್‌ಲೇಟ್ ಮಾಡುತ್ತಾರೆ. ಕೇಳೋಣ.

ಶ್ರೀ ವಿನಯಕುಮಾರ್ ಸೊರ್ಕೆ.—ಕೆರೆಗೋಸ್ಕರ ೫ ಸಾವಿರ ರೂಪಾಯಿಗಳು ಖರ್ಚಾಗಿದೆ. ಆದರೆ ಅಲ್ಲಿ ಸೈಟೇ ಇಲ್ಲ. ಅದನ್ನು ಮಾಡಿಯೇ ಇಲ್ಲ. ಕೆಲಸವೇ ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಹಣ ಮಾತ್ರ ಖರ್ಚಾಗಿದೆ. ಆ ಮಡ್ಡು ಎಲ್ಲಿ ಹೋಯಿತು? ಎಲ್ಲಿ ಖರ್ಚು ಮಾಡಿದ್ದಾರೆ ಎಂಬುದಕ್ಕೆ ತನಿಖೆ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಆ ಕೆಲಸವನ್ನು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟರು. ಲ್ಯಾಂಡ್ ಆರ್ಮಿರವರು ೫,೪೨೭ ರೂ.ಗಳನ್ನು ಖರ್ಚು ಮಾಡಿದ ನಂತರ ಅದನ್ನು ನಿಲ್ಲಿಸಿಬಿಟ್ಟರು. ಖರ್ಚಾದ ಹಣವನ್ನು ಲ್ಯಾಂಡ್ ಆರ್ಮಿಯವರು ಕೇಳುತ್ತಿದ್ದಾರೆ. ಈಗ ಆ ಕೆರೆಯ ಕೆಲಸವನ್ನು ನಿಲ್ಲಿಸಬೇಕೋ ಆಥವಾ ಮುಂದುವರಿಸಬೇಕೋ ಎಂಬುದನ್ನು ಪರಿಶೀಲನೆ ಮಾಡಿ ನೋಡಬೇಕಾಗಿದೆ. ಮೂರನೆಯ ಕೆರೆಯ ಬಗ್ಗೆ ಮಾಹಿತಿ ಇಲ್ಲ. ೨ನೇ ಕೆರೆಗೆ ೫ ಸಾವಿರ ರೂಪಾಯಿಗಳು ಖರ್ಚಾಗಿವೆ. ಆದರ ಕೆಲಸವನ್ನು ಮುಂದುವರಿಸಬೇಕೆಂದು ಮಾನ್ಯ ಸದಸ್ಯರು ಹೇಳುವುದಾದರೆ ಅದನ್ನೇ ಮುಂದುವರಿಸುತ್ತೇವೆ.

ಅಧ್ಯಕ್ಷರು.—ಐದು ಸಾವಿರ ರೂಪಾಯಿಯ ಕೆರೆಯನ್ನು ಹುಡುಕಿ, ಸಾಕಾದಷ್ಟು ಸಮಯವನ್ನು ಕಳೆದಿದ್ದೇವೆ. ಮಾನ್ಯ ಲಕ್ಕಣ್ಣನವರ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.

ಈಗ ಶ್ರೀ ರಾಜೂಗೌಡ ಅವರ ಪ್ರಶ್ನೆ.

ರಾಜ್ಯದಲ್ಲಿರುವ ಕುಷ್ಠ ರೋಗಿಗಳ ಸಂಖ್ಯೆ

೫೫೩(೧೧೭೧) ಶ್ರೀ ರಾಜುಗೌಡ (ಹಸೂರು).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜನ ಕುಷ್ಠ ರೋಗಿಗಳು ಇದ್ದಾರೆ? (ತಾಲ್ಲೂಕುವಾರು ವಿವರ ಕೊಡುವುದು)

ಆ) ಕುಷ್ಠರೋಗಿಗಳನ್ನು ಗುರುತಿಸುವ ಕೆಲಸದ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ?

ಇ) ಈ ರೋಗವನ್ನು ಹತೋಟಿಯಲ್ಲಿ ಇಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಒಟ್ಟು ೮೮,೬೫೧ ಕುಷ್ಠ ರೋಗಿಗಳನ್ನು ಸೋಂದಾಯಿಸಲಾಗಿದೆ? (ತಾಲ್ಲೂಕುವಾರು ಮಾಹಿತಿಯ ಬಗ್ಗೆ ಪಟ್ಟಿಯನ್ನು ಲಗತ್ತಿಸಿದೆ)

ಆ) ಕುಷ್ಠ ರೋಗಿಗಳನ್ನು ಗುರುತಿಸುವ ಕೆಲಸದ ಜವಾಬ್ದಾರಿಯನ್ನು ಆರೋಗ್ಯ ಇಲಾಖೆಯಲ್ಲಿ ವಿಶೇಷವಾಗಿ ನೇಮಕವಾಗಿರುವ ವೈದ್ಯಾಧಿಕಾರಿಗಳು, ಪ್ಯಾರಾ ಮೆಡಿಕಲ್ ವರ್ಕರ್ಸ್ ಹಾಗೂ ಸರ್ಕಾರದಿಂದ ಮನ್ನಣೆ ಪಡೆದಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಲಾಗಿದೆ.

ಇ) ಸರ್ಕಾರವು ಇದನ್ನು ನಿಯಂತ್ರಿಸಲು ಬಹುವಿಧ ಔಷದೋಪಚಾರ ಕಾರ್ಯಕ್ರಮವನ್ನು ಜಿಲ್ಲೆಗಳಲ್ಲಿ ಜಾರಿಗೊಳಿಸಿದ್ದು, ಅದಕ್ಕಾಗಿ ಒಟ್ಟು ೧೭ ಜಿಲ್ಲಾ ಕುಷ್ಠರೋಗ ಅಧಿಕಾರಿಗಳು, ಆರೋಗ್ಯಾಧಿಕಾರಿಗಳು ೮೨೫ ಪ್ಯಾರಾ ಮೆಡಿಕಲ್ ಕಲಸಗಾರರು ಹಾಗೂ ೪೯ ಯೋಗ ಶಾಲಾ ತಂತ್ರಜ್ಞರನ್ನು ಹೊಂದಿದ್ದು, ೧೯೮೯–೯೦ ರಲ್ಲಿ ೧೩೧.೯೩ ಲಕ್ಷ ರೂ.ಗಳನ್ನು ಖರ್ಚು ಮಾಡಿದೆ.

ಬಹು ವಿಧ ಔಷಧಿ ಚಿಕಿತ್ಸಾ ಕಾರ್ಯಕ್ರಮದಲ್ಲಿ ಆಳವಡಿಸಿ ಈಗ ರಾಜ್ಯದಲ್ಲಿ ಹಾಲಿ ಇರತಕ್ಕಂಥ ೧೦೦೦ ಜನ ಸಂಖ್ಯೆಗೆ ೨.೩ ಪರಿಷ್ಕೃತಿಯನ್ನು ಬದಲಾಯಿಸಿ ಪ್ರತಿ ೧೦೦೦ ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಮಾಡುವ ಉದ್ದೇಶವಿಟ್ಟುಕೊಳ್ಳಲಾಗಿದೆ. ಇದಕ್ಕೆ ಸಂಬಂದಿಸಿದಂತೆ ವಿಶೇಷ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಸಿನಿಮಾ, ಆಕಾಶವಾಣಿ, ದೂರದರ್ಶನ ಮುಂತಾದ ಮಾಧ್ಯಮದ ಮುಖಾಂತರ ಕುಷ್ಠರೋಗ ನಿಯಂತ್ರಣದ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಹಾಗೂ ಎರಡು ಕುಷ್ಠರೋಗ ನಿವಾರಣಾ ಕೇಂದ್ರ ಮತ್ತು ಪುನರ್ವಸತಿ ತರಬೇತಿ ಘಟಕಗಳಿಗೆ ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಕಟ್ಟಡವನ್ನು ಕಟ್ಟಲಾಗಿದೆ.

Sl. No.	Name of the Taluka	Case
	BANGALORE URBAN	
1	Anekal	888
2	Bangalore North	388
3	Bangalore South	442
4	Bangalore Corporation	2320
		4038
	BANGALORE RURAL	
1	Channapatna	407
2	Devanahalli	188
3	Doddaballapur	265
4	Hosakote	531
5	Kanakapur	1119
6	Magadi	265
7	Nelamangala	536
8	Ramanagar	307
		3618

1	2	3
	CHITRADURGA	
1	Challakere	202
2	Chitradurga	128
3	Davangere	549
4	Harihar	425
5	Hiriyur	69
6	Holalkere	75
7	Hosdurga	41
8	Jagalur	97
9	Molakalmuru	544
		2130
	GULBARGA	
1	Afzalpur	1127
2	Aland	2011
3	Chincholi	1624
4	Chitapur	1702
5	Gulbarga	2420
6	Jevargi	1533
7	Sedam	1362
8	Shahpur	1910
9	Shorapur	2129
10	Yadgir	1996
	TOTAL	17814
	RAICHUR	
1	Davadurga	1007
2	Gangavati	2445
3	Koppal	2407
4	Kustigi	2249
5	Lingsugur	2145
6	Manvi	1043
7	Raichur	1116
8	Sindhanur	1336
8	Yelabarga	2016
	TOTAL	15764

Sl. No.	Name of the Taluk	Cases
	CHICKMAGALUR	
1	Chickmagalur	90
2	Kadur	65
3	Koppa	16
4	Mudigere	11
5	Narasimharajapur	25
6	Sringeri	3
7	Tarikere	81
	TOTAL	291
	KOLAR	
1	Bagepally	603
2	Bangarpet	726
3	Chikkaballapur	302
4	Chintamani	789
5	Gowribidanur	614
6	Gudibanda	221
7	Kolar	792
8	Malur	616
9	Mulbagal	794
10	Shidalaghatta	521
11	Srinivaspur	581
	TOTAL	6559
	SHIMOGA	
1	Bhadravati	196
2	Channagiri	174
3	Honnali	238
4	Hosanagar	22
5	Sagar	32
6	Shikaripur	246
7	Shimoga	336
8	Sorab	58
9	Tirthahalli	11
	TOTAL	1313

1	2	3
	TUMKUR	
1	Chikkanayakanahalli	50
2	Gubbi	60
3	Koratagere	392
4	Kunigal	243
5	Madhugiri	829
6	Pavagada	467
7	Sira	195
8	Tiptur	9
9	Tumkur	563
10	Turauekere	21
	TOTAL	2829
	MANDYA	
1	Krishnarajpet	90
2	Maddur	1258
3	Malavalli	2789
4	Mandya	487
5	Nagamangal	115
6	Pandavapura	145
7	Srirangapatna	275
	TOTAL	5159
	MYSORE	
1	ChamaraJanagar	2489
2	Gundlupet	1299
3	Heggadadevanakote	171
4	Hunsur	81
5	Kolegal	2102
6	Krishnarajanagar	70
7	Mysore	892
8	Nanjangud	1652
9	Piriyapatna	59
10	T. Narasipur	766
11	Yellandur	550
		10131

Sl. No.	Name of the Taluk	Cases
	UTTARA KANNADA	
1	Ankola	44
2	Bhatkal	278
3	Haliyal	124
4	Honavar	73
5	Karwar	297
6	Kumta	155
7	Mundgod	145
8	Siddapur	34
9	Sirsi	90
10	Supa	18
11	Yellapur	47
		1305
	BELLARY	
1	Bellary	1669
2	H. Hadagali	1266
3	Hagaribommanahalli	1251
4	Harapanahalli	743
5	Hospet	1267
6	Kudligi	1843
7	Sandur	1227
5	Siruguppa	951
		10217
	BIDAR	
1	Aurad	1447
2	Basavakalyan	1165
3	Bhalki	1321
4	Bidar	1037
5	Homnabad	660
		5630

Sl. No.	Name of the Taluk	Cases
	BELGAUM	
1	Athni	345
2	Belgaum	759
3	Chikodi	421
4	Gokak	230
5	Hukeri	260
6	Khanapur	—
7	Saundatti	147
8	Raybag	93
9	Ramdurga	131
10	Bailhongal	236
	TOTAL	2622
	BIJAPUR	
1	Badami	1365
2	Bagalkot	889
3	Basavana Bagevadi	1191
4	Bijapur	1229
5	Bilgi	607
6	Hunagund	1721
7	Indi	1467
8	Jamakandi	908
9	Muddebhihal	1223
10	Mudhol	834
11	Sindagi	917
	TOTAL	1235

1	2	3
	DHARWAD	
1	Byadagi	141
2	Dharwad	274
3	Gadag	403
4	Hanga	214
5	Haveri	269
6	Hirekerur	215
7	Hubli	564
8	Kalaghatgi	126
9	Kundgo	210
10	Mundargi	207
11	Nargund	109
12	Navalgund	134
13	Ranibennur	421
14	Ron	227
15	Savanur	183
16	Shiggaon	158
17	Shirahatti	712
	TOTAL	4647
	DAKSHINA KANNADA	
1	Bantval	101
2	Beltangadi	22
3	Coondapur	932
4	Karkal	609
5	Mangalore	2876
6	Puttur	88
7	Sulya	45
8	Udupi	552
	TOTAL	5225

1	2	3
	HASSAN	
1	Alur	13
2	Arakalgud	31
3	Arasikere	40
4	Belur	31
5	Channarayapatna	34
6	Hassan	83
7	Holenarasipur	31
8	Sakaleshpur	6
	TOTAL	269
	MADIKERE	
1	Madikere	17
2	Somavarpet	34
3	Virajapet	40
	TOTAL	91

ಶ್ರೀ ಜಿ. ರಾಜುಗೌಡ.—ಅಧ್ಯಕ್ಷರೇ, ಇವತ್ತಿನದಿವಸ ರಾಜ್ಯದಲ್ಲಿ ಒಟ್ಟು ೮೮,೮೫೧ ಜನ ಕುಷ್ಟ ರೋಗಿಗಳು ಇದ್ದಾರೆಂದು ಹೇಳಿದ್ದಾರೆ. ಕಳೆದ ೧೦ ವರ್ಷಗಳಲ್ಲಿ ಈ ಸಂಖ್ಯೆ ಎಷ್ಟು ಇತ್ತು ಎನ್ನುವ ಬಗ್ಗೆ ನನಗೆ ವಿವರ ಕೊಡಬೇಕು. ಮತ್ತೆ ರಾಜ್ಯದಲ್ಲಿ ಕುಷ್ಟ ರೋಗವನ್ನು ಪೂರ್ಣ ನಿಯಂತ್ರಣ ಮಾಡುವ ಗುರಿ ಸರ್ಕಾರದಲ್ಲಿ ಇದೆಯೇ ? ಇದ್ದರೆ ಅದನ್ನು ಎಷ್ಟು ದಿವಸಗಳಲ್ಲಿ ಸಾಧಿಸುತ್ತೀರಿ ? ೧೦ ವರ್ಷಗಳ ಹಿಂದೆ ಈ ಸಂಖ್ಯೆ ಎಷ್ಟಿತ್ತು. ತಿಳಿಸುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—೧೦ ವರ್ಷಗಳ ಹಿಂದಿನ ಅಂಕಿ ಅಂಶ ಅವರು ಕೇಳಿದ್ದಾರೆ. ಈ ಬಗ್ಗೆ ಅವರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ.—ಅವರು ಪ್ರತಿ ವರ್ಷ ೧೩೧ ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಖರ್ಚುಮಾಡುತ್ತಿದ್ದಾರೆ. ಇಷ್ಟು ಖರ್ಚು ಮಾಡಿ ಈ ರೋಗ ನಿಯಂತ್ರಣ ಮಾಡುವುದರಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದೀರಿ ಎಂದು ನಾವು ತಿಳಿದುಕೊಳ್ಳುವುದು ಬೇಡವೇ ?

ಶ್ರೀಮತಿ ಮನೋರಮ ಮಧ್ವರಾಜ್.—ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಜಿ. ರಾಜುಗೌಡ.—ಈ ಬಗ್ಗೆ ತಮ್ಮ ಗುರಿ ಏನು ? ಯಾವಾಗ ಪೂರ್ಣ ಪ್ರಮಾಣದಲ್ಲಿ ಇದನ್ನು ನಿಯಂತ್ರಣ ಮಾಡುತ್ತೀರಿ ?

ಶ್ರೀಮತಿ ಮನೋರಮ ಮಧ್ವರಾಜ್.—ಯಾವಾಗ ಇದನ್ನು ಪೂರ್ಣ ನಿಯಂತ್ರಣ ಮಾಡಲಾಗುವುದು ಎಂದು ಹೇಳುವುದು ಅಷ್ಟು ಸುಲಭ ಅಲ್ಲ. ಆದರೂ ಆದಷ್ಟು ಪ್ರಯತಪಟ್ಟು ಇದನ್ನು ನಿಯಂತ್ರಣಕ್ಕೆ ತರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ.—ರಾಜ್ಯದ ೧೯ ಜಿಲ್ಲೆಗಳ ಪೈಕಿ ಮೈಸೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಎಂದರೆ ೧೦,೧೩೧ ಜನ ಕುಷ್ಟರೋಗಿಗಳಿದ್ದಾರೆ. ಅದರಲ್ಲೂ ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲೇ ೫ ಸಾವಿರ ಜನರು ಇದ್ದಾರೆ.

ಅಧ್ಯಕ್ಷರು.—ಗುಂಡ್ಲುಪೇಟೆಯಲ್ಲೂ ಇದ್ದಾರೆ.

ಶ್ರೀ ಜಿ. ರಾಜುಗೌಡ.—ಗುಂಡ್ಲುಪೇಟೆಯಲ್ಲೂ ಸ್ವಲ್ಪ ಜನ ಇದ್ದಾರೆ. ಆದರೆ ಹೆಚ್ಚು ಎಲ್ಲಿ ಇದ್ದಾರೆ ಎಂದು ಹೇಳುತ್ತಿದ್ದೇನೆ. ಮೈಸೂರು ಜಿಲ್ಲೆಯಲ್ಲೇ ಶೇಕಡಾ ೫೦ರಷ್ಟು ಜನ ಈ ಎರಡು ತಾಲ್ಲೂಕಿನಲ್ಲಿ ಇದ್ದಾರೆಂದು ತಮ್ಮ ಅಂಕಿಅಂಶದಿಂದ ಗೊತ್ತಾಗುತ್ತದೆ. ಆದ್ದರಿಂದ ನಾನು ಕೇಳಿ ಕೊಳ್ಳುವುದು ಇಷ್ಟೇ. ಕೊಳ್ಳೇಗಾಲ ತಾಲ್ಲೂಕಿನ ಹೊರ ವಲಯದಲ್ಲಿ ಎಂದರೆ ಬಯಲು ಪ್ರದೇಶದಲ್ಲಿ ತಾವು ಕುಷ್ಟ ರೋಗ ನಿಯಂತ್ರಣ ಕೇಂದ್ರವನ್ನು ಸ್ಥಾಪನೆ ಮಾಡಿ, ಆ ರೋಗಿಗಳಿಗೆ ಪುನರ್ವ್ಯವಸ್ಥೆ ಕಲ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಯೋಚನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್. ಯೋಚನೆ ಮಾಡುತ್ತೇನೆಂದರೆ ಆಗುವುದಿಲ್ಲ. ಇವತ್ತು ನಿಮ್ಮ ಮೇಲೆ ಗುರುತರವಾದ ಜವಾಬ್ದಾರಿ ಇದೆ. ೧೦ ಸಾವಿರ ಮಂದಿ. ಈ ಜಿಲ್ಲೆಯಲ್ಲಿ ಇದ್ದು, ಅದರಲ್ಲಿ ಶೇಕಡ ೫೦ ರಷ್ಟು ಜನ ಈ ಮೂರೂ ತಾಲ್ಲೂಕುಗಳಲ್ಲಿ ಇದ್ದಾರೆ. ಗುಂಡ್ಲೂಪೇಟೆ, ಚಾಮರಾಜನಗರ ಹಾಗೂ ಕೊಳ್ಳೇಗಾಲದಲ್ಲಿ ಇದ್ದಾರೆ. ಈ ಮೂರೂ ತಾಲ್ಲೂಕಿಗೆ ಸೇರಿಸಿ ಒಂದು ವ್ಯವಸ್ಥೆ ಮಾಡಿ. ಕೊಳ್ಳೇಗಾಲದಿಂದ ಅಲ್ಲಿಗೆ ೩೦ ಕಿ. ಮೀಟರ್, ಗುಂಡ್ಲೂ ಪೇಟೆಯಿಂದಲೂ ಅಲ್ಲಿಗೆ ೩೦ ಕಿ. ಮೀ. ಆಗುತ್ತದೆ. ಆದುದರಿಂದ ಈ ಮೂರೂ ತಾಲ್ಲೂಕಿಗೂ ಹೊಂದಿಕೊಳ್ಳುವಂತಹ ಒಂದು ವ್ಯವಸ್ಥಿತವಾದ ಆಸ್ಪತ್ರೆಯನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—ಈ ಮೂರೂ ತಾಲ್ಲೂಕುಗಳ ಮಧ್ಯೆ ಒಂದು ಆಸ್ಪತ್ರೆಯನ್ನು ಪ್ರಾರಂಭ ಮಾಡುತ್ತೇವೆ.

ಮಾಫಿ ಲೈಸನ್ಸ್ ಹೋಲ್ಡರ್ಸ್ ಚುಕ್ಕಿ ಗುರುತಿನ ಪ್ರಶ್ನೆ

೫೩೪ (೧೫೩೦ಎ) ಶ್ರೀ ಎಂ. ಪಿ. ವೆಂಕಟೇಶ (ಹೆಗ್ಗಡದೇವನಕೋಟೆ).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮಾಫಿ ಲೈಸನ್ಸ್ ಹೋಲ್ಡರ್ ಎಂದರೇನು ?

ಆ) ಅರಣ್ಯ ಇಲಾಖೆಯವರು ಮಾಫಿ ಪಾಸ್ ಲೈಸನ್ಸ್ ಯಾರಿಗೆ ನೀಡುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಸಚಿವರು).—

ಅ) ಇನಾಂ ಭೂಮಿ ಸ್ವಂತ ಹಿಡುವಳಿ ಜಮೀನು ಕಾಫಿತೋಟವನ್ನೊಳಗೊಂಡಂತೆ ಖಾಸಗಿ ಭೂಮಿಯಲ್ಲಿನ ಮರಮಟ್ಟು ಮತ್ತು ಸೌದೆ ಮುಂತಾದ ಉತ್ಪನ್ನಗಳನ್ನು ತೆಗೆಯಲು ನೀಡುವ ಪರವಾನಿಗೆಗೆ ಸಾಮಾನ್ಯವಾಗಿ ಮಾಫಿ ಪಾಸ್ ಎಂದು ಹೇಳಲಾಗುತ್ತದೆ. ಈ ಪರವಾನಿಗೆಯನ್ನು ನಮೂನೆ ೨೮ ರಲ್ಲಿ ಕರ್ನಾಟಕ ಅರಣ್ಯ ಕಾಯಿದೆ ೧೯೬೪, ಕಾಲಂ ೧೪೫(೩)ರ ಪ್ರಕಾರ ನೀಡಲಾಗುತ್ತದೆ. ಕಾನೂನು ರೀತ್ಯ ಯಾರು ಈ ಪರವಾನಿಗೆಯನ್ನು ಅಧಿಕೃತವಾಗಿ ಪಡೆಯುತ್ತಾರೋ ಅವರನ್ನು ಮಾಫಿ ಪಾಸ್ ಹೋಲ್ಡರ್ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

ಆ) ನಮೂನೆ ೨೮ನ್ನು ಜಮೀನಿನ ಯಜಮಾನ ಅಥವಾ ಅನುಭೋಗದಾರ ಅಥವಾ ಅವರಿಂದ ಅಧಿಕಾರ ಹೊಂದಿದ ವ್ಯಕ್ತಿಗೆ ನೀಡಲಾಗುತ್ತದೆ,

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ ಕಾನೂನು ಚೌಕಟ್ಟಿನಲ್ಲಿ ಯಾರು ಬೇಕಾದರೂ ತೆಗೆದುಕೊಳ್ಳಬಹುದೆಂದು ಹಾಗೂ ಎರಡನೆಯ ಪ್ರಶ್ನೆಗೆ ಉತ್ತರವಾಗಿ ನಮೂನೆ–೨೮ನ್ನು ಜಮೀನಿನ ಯಜಮಾನ ಅಥವಾ ಅನು ಭೋಗದಾರ ಅಥವಾ ಅವರಿಂದ ಅಧಿಕಾರ ಹೊಂದಿದ ವ್ಯಕ್ತಿಗೆ ನೀಡಲಾಗುತ್ತದೆಂದು ಹೇಳಿದ್ದಾರೆ. ಈ ಮೂಲಕ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ೧೫–೬–೯೦ ರಲ್ಲಿ ನಾನು ಸದನದಲ್ಲಿ ಇಲ್ಲದೇ